ದಿಃ **17.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಎಸ್ ಕೆ ಯು ವಕೀಲರಿಂದ ವಾದಿಯ ಪರ</u>

ನಾನು ಒಂದನೇ ಪ್ರತಿವಾದಿ ಪಾಲುಗಾರಿಕಾ ಸಂಸ್ಥೆಯಲ್ಲಿ Chief Executive Officer ಆಗಿರುತ್ತೇನೆ. ಒಂದನೇ ಪ್ರತಿವಾದಿ ಪಾಲುಗಾರಿಕಾ ಸಂಸ್ಥೆಯಲ್ಲಿ ಸಂತೋಷ್ ಎಸ್ ಆನವಟ್ಟಿ ಮತ್ತು ಅವರ ಹೆಂಡತಿ ಸ್ನೇಹಾ ಎಸ್ ಆನವಟ್ಟಿ ಪಾಲುದಾರರಾಗಿದ್ದರೆ. ಒಂದನೇ ಪ್ರತಿವಾದಿಯ ಪಾಲುಗಾರಿಕಾ ಸಂಸ್ಥೆಯ Partnership deed ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಜಿ ಆರ್ ಎಸ್ ಇದಕ್ಕೆ ಯಾವುದೇ full form ಇರುವುದಿಲ್ಲ ಜಿ ಎಂದರೆ ಗೋವಿಂದ ಅಂದರೆ ನನ್ನ ಹೆಸರು ಎಂದರೆ ಸರಿಯಲ್ಲ. ಆರ್ ಎಂಬ ಅಕ್ಷರವು ರೂಪ ಅಂದರೆ ನನ್ನ ಹೆಂಡತಿಯ ಹೆಸರನ್ನು ಸೂಚಿಸುತ್ತದೆ ಎಂದರೆ ಸರಿಯಲ್ಲ. ಎಸ್ ಎಂಬ ಅಕ್ಷರವು ಸಂತೋಷ್ ಎಂಬುವವರನ್ನು ಸೂಚಿಸುತ್ತದೆ ಎಂದರೆ ಸರಿಯಲ್ಲ. ಜಿ ಆರ್ ಎಸ್ ಎಂಬ ಪಾಲುಗಾರಿಕಾ ಸಂಸ್ಥೆಯಲ್ಲಿ ನಾನು ಸಹ ಒಬ್ಬ ಪಾಲುದಾರನಾಗಿದ್ದೇನೆ ಎಂದರೆ ಸರಿಯಲ್ಲ. ಜಿ ಆರ್ ಎಸ್ ಎಂದರೆ ಗೋವಿಂದ, ರೂಪ ಮತ್ತು ಸಂತೋಷ್ ರವರ ಪಾಲುಗಾರಿಕಾ ಸಂಸ್ಥೆ ಆಗಿದ್ದರು ಸಹ ಈಗ ನಾನು ದುರುದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂತೋಷ್ ಎಸ್ ಆನವಟ್ಟಿ ಜಿ ಆರ್ ಎಸ್ ಮಾರ್ಕೆಟಿಂಗ್ ಪಾಲುಗಾರಿಕಾ ಸಂಸ್ಥೆಯಲ್ಲಿ ಮೊದಲಿನಿಂದಲೂ ಪಾಲುದಾರರಾಗಿದ್ದಾರೆ. ಜಿ ಆರ್ ಎಸ್ ಮಾರ್ಕೆಟಿಂಗ್ ಪಾಲುಗಾರಿಕಾ ಸಂಸ್ಥೆಯನ್ನು ಪ್ರಾರಂಭ ಮಾಡುವಾಗ ನಾನು ಅಂದರೆ ಗೋವಿಂದ, ನನ್ನ ಹೆಂಡತಿ ರೂಪ ಹಾಗೂ ಸಂತೋಷ್ ಆನವಟ್ಟಿಯವರು ಪಾಲುಗಾರರು ಆಗಿದ್ದೇವು ಎಂದರೆ ಸರಿಯಲ್ಲ. ನನ್ನ ಹೆಂಡತಿ ರೂಪ ರವರನ್ನು ಪಾಲುಗಾರಿಕಾ ಸಂಸ್ಥೆಯಿಂದ ತೆಗೆದು ಅವರ ಜಾಗದಲ್ಲಿ ಸಂತೋಷ್ ಎಸ್ ಆನವಟ್ಟಿ ಯವರ ಹೆಂಡತಿ ಸ್ನೇಹಾ ಎಸ್ ಆನವಟ್ಟಿ ರವರನ್ನು ಹಾಕಿಕೊಳ್ಳಲಾಗಿತ್ತು ಎಂದರೆ ನನಗೆ ನೆನಪು ಆಗುತ್ತಿಲ್ಲ.

Aachi Masala ವು ದೇಶಿಯ ಮತ್ತು ಅಂತರಾಷ್ಟ್ರೀಯ ಮಟ್ಟದ ಬ್ರಾಂಡ್ ಆಗಿರುತ್ತದೆ ಎಂದರೆ ಸರಿ. Aachi Masala ಶೇಖರಣೆ ಮಾಡಲು ಮತ್ತು ವಿತರಿಸಲು ಬೆಂಗಳೂರಿನಲ್ಲಿ ನಾನೇ ವೈಯಕ್ತಿಕವಾಗಿ ಗೋಡೌನ್ ಅನ್ನು ಮಾಡಿದ್ದೇನು. ಅದರ ಖರ್ಚು ವೆಚ್ಚಗಳನ್ನು Aachi Masala ಕಂಪನಿಯವರೇ ಕೊಡುತ್ತಿದ್ದರು. Aachi Masala Product ಅನ್ನು ವಿತರಿಸಲು ಬೇಕಾದ ವಾಹನಗಳು ಮತ್ತು ಚಾಲಕರನ್ನು

ನಾನೇ ನೇಮಕ ಮಾಡಿಕೊಳ್ಳುತ್ತಿದ್ದೆ. ಆ ಖರ್ಚನ್ನು Aachi Masala product ಅನ್ನು ಮಾರಾಟ ಮಾಡಿ ಬರುವ ಹಣದಲ್ಲಿನ ಕಮೀಷನ್ ನಲ್ಲಿ ಬರಿಸಬೇಕು. Aachi Masala ಕಂಪನಿಯವರು ಶೇಕಡಾ 4 ರಷ್ಟು ಕಮೀಷನ್ ಅನ್ನು ಕೊಡುತ್ತಿದ್ದರು. ಗೋಡೌನ್ ಅನ್ನು ನಾನೇ ಬಾಡಿಗೆಗೆ ತೆಗೆದುಕೊಳ್ಳುತ್ತಿದ್ದೆ. ಸಾಕ್ಷಿ ಸ್ವ ಇಚ್ಛೆಯಿಂದ ಹೇಳುತ್ತಾರೆ ನಾನು ಎಂದರೆ 1ನೇ ಪ್ರತಿವಾದಿ ಜಿ ಆರ್ ಎಸ್ ಮಾರ್ಕೆಟಿಂಗ್ ಎಂದು.

ವಾದಿ ಸಂಸ್ಥೆಯು ತಯಾರಿಸುತ್ತಿರುವ ಮಸಲಾ product ಲೋಕಲ್ product ಎಂದರೆ ಸರಿ. ವಾದಿ ಸಂಸ್ಥೆಯವರು ಬಂದು ಅವರ product ಗೂ ಸಹ ಮಾರ್ಕೆಟಿಂಗ್ ತೆಗೆದುಕೊಳ್ಳುವಂತೆ ಹೇಳಿದ್ದರಿಂದ ನಾವು ವಾದಿ ಸಂಸ್ಥೆಯ ಮಸಾಲಾ product ನ ಮಾರ್ಕೆಟಿಂಗ್ ಅನ್ನು ತೆಗೆದುಕೊಂಡಿದ್ದೇವು. ವಾದಿ ಸಂಸ್ಥೆಯ ಮಸಾಲಾ product ನ ಮಾರ್ಕೆಟಿಂಗ್ ಅನ್ನು ತೆಗೆದುಕೊಂಡಾಗ Aachi Masala super-stockist ಹಾಗೂ ವಿತರಣೆಯನ್ನು ಬಿಟ್ಟಿದ್ದೇವು. ಒಬ್ಬ ಸಂತೋಷ್ ಎನ್ನುವವರು Aachi Masala ಕಂಪನಿಯ ಉದ್ಯೋಗಿಯಾಗಿದ್ದರು. Aachi Masala product ನ ವಿತರಣೆಯನ್ನು ಕೈ ಬಿಟ್ಟ ನಂತರ ಬೆಂಗಳೂರಿನಲ್ಲಿದ್ದ ಗೋಡೌನ್ ಅನ್ನು ನಾವು ಬಿಟ್ಟಿದ್ದೇವು. ಅಲ್ಲದೇ ನಮ್ಮಲ್ಲಿದ್ದ ನಾಲ್ಕು ವಾಹನಗಳ ಪೈಕಿ ಎರಡು ವಾಹನವನ್ನು ಮಾರಾಟ ಮಾಡಿ ಉಳಿದ ಎರಡು ವಾಹನವನ್ನು ಮಾತ್ರ ಇಟ್ಟುಕೊಂಡಿದ್ದೇವು. ನಾವು Aachi Masala super-stockist ಮತ್ತು ವಿತರಕರಾಗಿ Aachi Masala ಕಂಪನಿಗೆ ಮೋಸ ಮಾಡಿದ್ದರಿಂದ ನಮ್ಮನ್ನು super-stockist ಮತ್ತು ವಿತರಕರ ಸ್ಥಾನದಿಂದ ತೆಗೆದು ಹಾಕಿದ್ದರು ಎಂದರೆ ಸರಿಯಲ್ಲ. ನಮ್ಮನ್ನು Aachi Masala ಕಂಪನಿಯಿಂದ ತೆಗೆದು ಹಾಕಿರುವ ವಿಚಾರವನ್ನು ಮುಚ್ಚಿಟ್ಟು ವಾದಿ ಸಂಸ್ಥೆಯೊಂದಿಗೆ ಅದರ product ಅನ್ನು ಮಾರ್ಕೆಟಿಂಗ್ ಮಾಡಲು ಕರಾರು ಮಾಡಿಕೊಂಡಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ವಾದಿ ಸಂಸ್ಥೆಯೊಂದಿಗೆ ಅದರ product ಅನ್ನು ಮಾರ್ಕೆಟಿಂಗ್ ಮಾಡಲು ಕರಾರು ಮಾಡಿಕೊಂಡಿದ್ದೇವು ಆದರೆ ಯಾವುದೇ ವಿಚಾರವನ್ನು ಮುಚ್ಚಿಟ್ಟಿಲ್ಲ ಎಂದು. ಈಗ ತೋರಿಸಿದ ನಿಡಿ-1 ನಮ್ಮ ಹಾಗೂ ವಾದಿ ಸಂಸ್ಥೆಯ ನಡುವೆ ಆದ ಕರಾರು ಎಂದರೆ ಸರಿ. 1ನೇ ಪ್ರತಿವಾದಿ ಸಂಸ್ಥೆಯ ಪರ ಕರಾರಿಗೆ ನಾನೇ ಸಹಿ ಮಾಡಿದ್ದೆ. ವಾದಿ ಸಂಸ್ಥೆಯೊಂದಿಗೆ ನಿಡಿ-1 ರಂತೆ ಕರಾರು ಮಾಡಿಕೊಂಡಿರುವ ವಿಚಾರ 1ನೇ ಪ್ರತಿವಾದಿ ಪಾಲುಗಾರಿಕಾ ಸಂಸ್ಥೆಯ ಪಾಲುದಾರರಿಗೆ ತಿಳಿದಿರುತ್ತದೆ. ನಿಡಿ-1 ರಲ್ಲಿರುವ ಎಲ್ಲಾ

ವಿಚಾರಗಳನ್ನು ನಾನು ಓದಿ ನೋಡಿ ತಿಳಿದುಕೊಂಡಿದ್ದು ಅದು ಸರಿ ಇರುತ್ತದೆ. ಸದರಿ ಕರಾರಿಗೆ ಒಂದನೇ ಪ್ರತಿವಾದಿಯ ಪಾಲುದಾರರ ಒಪ್ಪಿಗೆಯು ಸಹ ಇರುತ್ತದೆ.

ವಾದಿ ಸಂಸ್ಥೆಯ ಉತ್ಪನ್ನಗಳು ಒಳ್ಳೆಯ ಗುಣಮಟ್ಟದ ಉತ್ಪನ್ನಗಳಾಗಿತ್ತು ಎಂದರೆ ಸರಿ. ವಾದಿ ಸಂಸ್ಥೆಯವರು ಪ್ರಾರಂಭದಲ್ಲಿ 1ನೇ ಪ್ರತಿವಾದಿ ಸಂಸ್ಥೆಯನ್ನು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ super-stockist ಎಂದು ನೇಮಕ ಮಾಡಿಕೊಂಡಿದ್ದರು. ವಾದಿ ಸಂಸ್ಥೆಯ ಉತ್ಪನ್ನಗಳನ್ನು ಶೇಖರಿಸಿಡಲು ಗೋಡೌನ್ ಅನ್ನು ಮೈಸೂರಿನಲ್ಲಿ ಹೊಂದಿದ್ದೇವು. Whatsapp , ಇ-ಮೇಲ್ ಮತ್ತು ಕೆಲವು ಬಾರಿ ಪೋನ್ ಮೂಲಕ ವಾದಿ ಸಂಸ್ಥೆಗೆ ಅದರ ಉತ್ಪನ್ನಗಳನ್ನು ಕಳುಹಿಸಿಕೊಡುವಂತೆ ಕೇಳುತ್ತಿದ್ದೇವು. ಎಷ್ಟು ಉತ್ಪನ್ನದ ಅಗತ್ಯವಿದೇಯೋ ಅಷ್ಟನ್ನು ಮಾತ್ರ ನಾವು ವಾದಿ ಸಂಸ್ಥೆಯಿಂದ ತರಿಸಿಕೊಳ್ಳುತ್ತಿದ್ದೇವು. ಸಾಕ್ಷಿ ಪುನಹಃ ಹೇಳುತ್ತಾರೆ ವಾದಿ ಸಂಸ್ಥೆಯವರು ತಿಂಗಳಿಗೆ target ಇಟ್ಟಿದ್ದು ಅಷ್ಟನ್ನು ತರಿಸುತ್ತಿದ್ದೇವು ಎಂದು. ವಾದಿ ಸಂಸ್ಥೆಯವರು ತಿಂಗಳಿಗೆ ಇಷ್ಟು ಎಂದು target ಇಟ್ಟಿದ್ದರು ಎಂಬುದನ್ನು ನಾನು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿ. ನಾವು ಕೇಳಿದ ಉತ್ಪನ್ನಗಳನ್ನು ವಾದಿ ಸಂಸ್ಥೆಯವರು ಸಪ್ಲೈ ಮಾಡುವ ಸಮಯದಲ್ಲಿ ಅವರ ಉತ್ಪನ್ನಕ್ಕೆ ಸಂಬಂಧಿಸಿದ invoice ಅನ್ನು ಸಹ ಉತ್ಪನ್ನದೊಂದಿಗೆ ಕಳುಹಿಸುತ್ತಿದ್ದರು. ನಾವು ವಾದಿ ಸಂಸ್ಥೆಯ ಉತ್ಪನ್ನಗಳನ್ನು order ಮಾಡುವ ಮೊದಲು ಉತ್ಪನ್ನದ ಮೊತ್ತವನ್ನು ಮುಂಗಡವಾಗಿಯೇ ವಾದಿ ಸಂಸ್ಥೆಗೆ ಪಾವತಿಸುತ್ತಿದ್ದೇವು. ವಾದಿ ಸಂಸ್ಥೆಯವರು ಅವರದೇ ಖರ್ಚಿನಲ್ಲಿ ಅವರೇ ನೇಮಿಸಿದ ವಾಹನದಲ್ಲಿ ಉತ್ಪನ್ನಗಳನ್ನು ನಮಗೆ ಸರಬರಾಜು ಮಾಡುತ್ತಿದ್ದರು ಎಂದರೆ ಸರಿ. ನಾವು ಎಷ್ಟು ಮೊತ್ತದ ಉತ್ಪನ್ನಕ್ಕೆ order ಹಾಕಿದ್ದೇವು ಮತ್ತು ವಾದಿ ಸಂಸ್ಥೆಯಿಂದ ಎಷ್ಟು ಮೊತ್ತದ ಉತ್ಪನ್ನವನ್ನು ನಮಗೆ ಸಪ್ಲೈ ಮಾಡಿದ್ದರು ಎಂಬ ಬಗ್ಗೆ ವಾದಿ ಸಂಸ್ಥೆಯವರು ledger ಅನ್ನು ಇಟ್ಟಿದ್ದರು ಎಂದರೆ ಸರಿ. ನಾವು ಮುಂಗಡವಾಗಿ ಪಾವತಿಸಿದಂತಹ ಹಣವನ್ನು ಸಹ ವಾದಿ ಸಂಸ್ಥೆಯವರು ಸದರಿ ledger ನಲ್ಲಿ ನಮೂದಿಸಿಸುತ್ತಿದ್ದರು ಎಂದರೆ ಸರಿ. ಸದರಿ ledger ಅನ್ನು ನಾವು ಸಹ ಪರಿಶೀಲಿಸಿ ಅದು ಸರಿ ಇದೆ ಎಂದು ಒಪ್ಪಿದ್ದೇವು ಎಂದರೆ ಸರಿ. ವಾದಿ ಸಂಸ್ಥೆಯವರು ledger account ಅನ್ನು ಕಂಪ್ಯೂಟರ್ ನಲ್ಲಿಯೇ ಜನರೇಟ್ ಮಾಡುತ್ತಿದ್ದರು.

ವಾದಿ ಸಂಸ್ಥೆಯಿಂದ ಉತ್ಪನ್ನವನ್ನು ಕಳುಹಿಸುವ ಸಮಯದಲ್ಲಿ ಉತ್ಪನ್ನಕ್ಕೆ ಯಾವುದೇ ರೀತಿಯ ಹಾನಿಯಾಗಿದ್ದರೆ ಅದನ್ನು ಕೂಡಲೇ ನಾವು ವಾದಿ ಸಂಸ್ಥೆಗೆ ತಿಳಿಸಿ ಅಂತಹ ಹಾನಿಗೊಂಡ ಉತ್ಪನ್ನವನ್ನು ವಾದಿ ಸಂಸ್ಥೆಗೆ ಹಿಂತಿರುಗಿಸಬೇಕು ಎಂದರೆ ಸರಿ. ಆ ರೀತಿ ಹಿಂದಕ್ಕೆ ಕಳುಹಿಸಿದ ಉತ್ಪನ್ನಕ್ಕೆ ವಾದಿ ಸಂಸ್ಥೆಯವರು ಕ್ರೇಡಿಟ್ ನೋಟ್ ಕೊಡುತ್ತಿದ್ದರು ಎಂದರೆ ಸರಿ. ನಾವು ವಾದಿ ಸಂಸ್ಥೆಗೆ ಆನ್ ಲೈನ್ ಮೂಲಕ ಮಾತ್ರ ಹಣ ಪಾವತಿ ಮಾಡುತ್ತಿದ್ದೇವು. ನಿಡಿ-1 ರಂತೆ ಕರಾರು ಆಗಿ ಸುಮಾರು 4 ವರ್ಷಗಳ ಕಾಲ ನಮ್ಮ ಹಾಗೂ ವಾದಿ ಸಂಸ್ಥೆಯ ನಡುವೆ ವ್ಯವಹಾರವು ಮೇಲೆ ಹೇಳಿದಂತೆ ಚೆನ್ನಾಗಿ ನಡೆಯುತ್ತಿತ್ತು.

ಆರಂಭದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಮಾರ್ಕೆಟಿಂಗ್ ಹಕ್ಕು ಇದ್ದು ನಂತರ ಮಾರ್ಕೆಟಿಂಗ್ ಹಕ್ಕನ್ನು ಸಂಪೂರ್ಣ ಉತ್ತರ ಕರ್ನಾಟಕದ ಭಾಗಕ್ಕೆ ಕರಾರಿನ ಮೂಲಕ ವಿಸ್ತರಣೆ ಮಾಡಲಾಗಿತ್ತು. ಸಾಕ್ಷಿ ಸ್ವ ಇಚ್ಛೆಯಿಂದ ಹೇಳುತ್ತಾರೆ ಕರಾರಿನಲ್ಲಿ ಯಾವ ಯಾವ ಜಿಲ್ಲೆಗಳೆಂದು ಸ್ಪಷ್ಟವಾಗಿ ನಮೂದಿಸಲಾಗಿದೆ ಎಂದು. ಇದಾದ ನಂತರ ಮಾರ್ಕೆಟಿಂಗ್ ರೈಟ್ ಅನ್ನು ಶಿವಮೊಗ್ಗ, ಹಾಸನ, ಸಕಲೇಶಪುರ, ಕೂರ್ಗ್, ಮಂಗಳೂರು ಹಾಗೂ ಉಡುಪಿಗೂ ಸಹ ವಿಸ್ತರಿಸಿದ್ದರು. ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡಕ್ಕೆ ವಾದಿ ಸಂಸ್ಥೆಯವರೇ ನೇರವಾಗಿ ಮಾರ್ಕೆಟಿಂಗ್ ಮಾಡುತ್ತಿದ್ದರು. ಮಾರ್ಕೆಟಿಂಗ್ ವಿಚಾರದ ಕುರಿತು ನಿಡಿ-1 ರಲ್ಲಿ ಹೇಳಿದ ಅಂಶಗಳು ಸರಿಯಾಗಿರುತ್ತದೆ.

ಈ ಹಂತದಲ್ಲಿ ಶ್ರೀ ಎಸ್ ಕೆ ಯು ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರುತ್ತಿದ್ದು ಆಲಿಸಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.